ತಿಂಗಳ ಸಂಬಳದ ರೂಪದಲ್ಲಿಯೆಗೆ ಕೊಡಲಾಗುತ್ತಿದೆ. ಅವರ ಬೇಡಿಕೆ ಏನು ಇದೆ ಅಂದರೆ ಆಯಾಯ ಹುದ್ದೆಯಲ್ಲಿರತಕ್ಕವರನ್ನು ಪೂರ್ಣವಾಗಿ ಖಾಯಂ ಮಾಡಬೇಕು ಬಡ್ತಿ ವ್ಯವಸ್ಥೆ ಮಾಡಬೇಕೆಂದು ಇದೆ. ಪಿ. ಡಬ್ಲ್ಯು ಡಿ ಯಲ್ಲಿ ಇದ್ದಹಾಗೆ ದಿನಗೂಲಿ ನೌಕರರಂ ಈ ಮಂಡಲಿಯಲ್ಲಿ ಇಲ್ಲ. ೨೧ನೇ ತಾರೀಖು ನೌಕರರ ಸಂಘ ನಮ್ಮ ಮಂಡಲಿಯವರ ಜೊತೆ ಚರ್ಚೆ ಮಾಡಲಿಕ್ಕೆ ವ್ಯವಸ್ಥೆ ಮಾಡಿದ್ದಾರೆ ಇನ್ನೂ ಅವರ ಕೆಲವಾರು ಬೇಡಿಕೆಗಳು ಏನಿವೆ ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಮಾನ್ಯಮಂತ್ರಿಗಳು ದಿನಗೂಲಿ ನೌಕರರನ್ನು ಖಾಯಂ ಮಾಡತಕ್ಕದ್ದು ಸರ್ಕಾರದ ಅಭಿಪ್ರಾಯದಲ್ಲಿ ಇಲ್ಲ ಎಂದು ಹೇಳಿದ್ದಾರೆ. ಈಗ ಈ ಲೋಕಸೇವಾ ಆಯೋಗದಲ್ಲಿ ಕೆಲಸ ಮಾಡತಕ್ಕ ದಿನಗೂಲಿ ನೌಕರರನ್ನು ಯಾವರೀತಿ ಖಾಯಂ ಮಾಡಿದಿರಿ ? ಉಳಿದ ಇಲಾಖೆಯಲ್ಲಿರತಕ್ಕವರನ್ನು ಖಾಯಂ ಮಾಡದೇ ಇರುವುದಕ್ಕೆ ಕಾರಣ ಏನು ?

ಶ್ರೀ ಎಂ. ಚಂದ್ರಶೇಖರ್.—ಲೋಕಸೇವಾ ಆಯೋಗದ್ದು ನನಗೆ ಅರ್ಥ ಆಗಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ನಗರ ನೀರು ಸರಬರಾಜು ಮಂಡಲಿಗೂ ಅದಕ್ಕೂ ಸಂಬಂಧ ಇಲ್ಲ. ಅದರ ಬಗ್ಗೆ ತಾವು ಬೇರೆ ಪ್ರಶ್ನೆ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಈಗ ತಾವು ಒಂದೇ ದೃಷ್ಟಿಯಲ್ಲಿ ನೋಡುತ್ತೇವೆಂದು ಹೇಳಿದ್ದೀರಿ. ೧೫ ರೂಪಾಯಿ ಪ್ರಕಾರ ಕಡಿಮೆ ಸಂಬಳದಲ್ಲಿ ದಿನಗೂಲಿ ಮೇಲೆ ನೇಮಕ ಮಾಡಿಕೊಂಡಿದ್ದಾರೆ. ಅತೀ ಕಡಿಮೆ ಸಂಬಳದಲ್ಲಿ ಒಬ್ಬವ್ಯಕ್ತಿಯಿಂದ ದುಡಿಸಿಕೊಳ್ಳುವುದು ಶೋಷಣೆಯಾಗುತ್ತದೆ. ಈ ವಿಚಾರದ ಸರ್ಕಾರಕ್ಕೆ ಮಾನವೀಯತೆ ಇರಬೇಕು. ಈ ದೃಷ್ಟಿಯಿಂದಲಾದರೂ ಈ ದಿನಗೂಲಿ ನೌಕರರನ್ನು ಖಾಯಂ ಮಾಡಿ. ಸರ್ಕಾರಿ ನೌಕರರಿಗೆ ಕೊಡತಕ್ಕ ಎಲ್ಲ ಸೌಲಭ್ಯಗಳನ್ನು ಕೊಡತಕ್ಕ ಮನಸ್ಸು ಮಾಡಬೇಕು. ಆ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕು. ಕರ್ನಾಟಕ ರಾಜ್ಯ ದಿನಗೂಲಿ ನೌಕರರ ಸಂಘದವರು ಈ ಬಗ್ಗೆ ಸರ್ಕಾರಕ್ಕೆ ಅನೇಕ ಮನವಿಗಳನ್ನು ಸಲ್ಲಿಸಿದ್ದಾರೆ ಆದ್ದರಿಂದ ದಯಮಾಡಿ ತಾವು ಇದರ ಬಗ್ಗೆ ಸಹಾನುಭೂತಿಯಿಂದ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ನಾನು ಈ ಮಂಡಲಿಗೆ ಸಂಬಂಧಪಟ್ಟಂತೆ ಮಾತ್ರ ಹೇಳುತ್ತೇನೆ. ಮಂಡಲಿಯಲ್ಲಿ ದಿನಗೂಲಿಯವರು ಯಾರೂ ಇಲ್ಲ. ಅವರಿಗೆ ಉದ್ಯೋಗ ಖಾಯಂ ಆದ ಹಾಗೆಯೆ. ಈಗ ಅವರಿಗೆ ತೆಗೆಯುವುದಿಲ್ಲ. ಟೈಮ್‌ಬೌಂಡ್ ಸ್ಕೇಲ್ ಕೊಟ್ಟ ಹೇಲೆ ತೆಗಯುವ ಹಾಗೆ ಇಲ್ಲ. ಮುಂದಿನ ಬಡ್ತಿ ಮುಂತಾದ್ದಕ್ಕೆ ಅವಕಾಶ ಮಾಡಿಕೊಡಬೇಕೆಂದು ಅದರ ಬೇಡಿಕೆ ಇದೆ. ಅದರ ಬಗ್ಗೆ ನಾನು ಆಗಲೇ ಹೇಳಿದ್ದೇನೆ ೨೧ನೇ ತಾರೀಖಿನ ಸಭೆಯಲ್ಲಿ ಅವರ ಬೇಡಿಕೆಗಳು ಏನಿವೆ ಅದರ ಬಗ್ಗೆ ಪರಿಶೀಲನೆ ಮಾಡೋಣ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಮಂತ್ರಿಗಳ ಜವಾಬ್ದಾರಿಯೂ ಇದರಲ್ಲಿ ಇದೆ...

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ನಾನು ಮೂರು ಸಾರಿ ಅವಕಾಶ ಮಾಡಿಕೊಟ್ಟಿದ್ದೇನೆ. ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು,

ಅಧ್ಯಕ್ಷರು.—ಈ ಪ್ರಶ್ನೆ ೨೨೫೦ನ್ನು ತಡೆಹಿಡಿಯಲಾಗಿದೆ

ಇಂಚಲ್ ಗ್ರಾಮದಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಕಾಮಗಾರಿಗಳು

೨೨೦೨. ಶ್ರೀ ಶಿವಾನಂದ ಎಚ್. ಕೌಜಲಗಿ(ಬೈಲಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಸೌದತ್ತಿ ತಾಲ್ಲೂಕು ಇಂಚಲ ಗ್ರಾಮದಲ್ಲಿ ಎನ್ ಆರ್‌ಡಬ್ಲ್ಯೂಎಸ್ ಕೆಲಸವು ಯಾವಾಗ ಮಂಜೂರಾಯಿತು ಹಾಗೂ ಅದಕ್ಕೆ ಎಷ್ಟು ಹಣಕ್ಕೆ ಆಡಳಿತಾತ್ಮಕ ಮಂಜುರಿ ಕೊಡಲಾಯಿತು ?

ಆ) ಇದುವರೆವಿಗೂ ಖರ್ಚಾಗಿರುವ ಹಣವೆಷ್ಟು

ಇ) ೧೯೮೭-೮೮ನೇ ಸಾಲಿನಲ್ಲಿ ಈ ಕೆಲಸಕ್ಕೆ ಖರ್ಚಾಗಿರುವ ಹಣವೆಷ್ಟು ?

ಈ) ಸದರೀ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಇರುವುದರಿಂದ ಈ ಕೆಲಸವನ್ನು ಬೇಗ ಮುಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ವಿ. ದೇಶಪಾಂಡೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳ ಪರವಾಗಿ).—

ಅ) ೬-೨-೧೯೮೫ ರೂ. ೭,೬೯,೦೦೦

ಆ) ಮೇ ೧೯೮೮ ಅಂತ್ಯದವರೆಗೆ ರೂ. ೫,೪೩,೦೦೦

ಇ) ರೂ. ೨,೭೧,೦೦೦

ಈ) ತೆರೆದ ಬಾವಿಯನ್ನು ಜಲಮೂಲವನ್ನಾಗಿ ಪರಿಗಣಿಸಿ ಈ ಕೆಲಸ ಪ್ರಗತಿಯಲ್ಲಿದೆ. ಭೂ ಮಟ್ಟದ ಜಲಾಶಯದ ಕೆಲಸ ಮುಕ್ತಾಯದ ಹಂತದಲ್ಲಿದೆ. ರೈಸಿಂಗ್ ಪಂಪ್ ಮತ್ತು ವಿತರಣಾ ವ್ಯವಸ್ಥೆ ಪೂರ್ಣಗೊಂಡಿದೆ. ಮಾರ್ಚ್ ೮೯ರ ಅಂತ್ಯದೊಳಗೆ ಎಲ್ಲಾ ಕೆಲಸವನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ನಾನು ಕಳೆದ ಅಧಿವೇಶನದಲ್ಲಿ ಕೇಳಿದಾಗ ಮಾನ್ಯ ಮಂತ್ರಿಗಳು ೧೯೮೮ರ ಮಾರ್ಚಿಯೊಳಗೆ ಈ ಕೆಲಸವನ್ನು ಮುಗಿಸಿಕೊಡುತ್ತೇವೆಂದು ಹೇಳಿದ್ದರು. ಆದರೆ ಇವತ್ತು ಹೇಳುತ್ತಿದ್ದಾರೆ, ೧೯೮೯ನೇ ಮಾರ್ಚಿಯೊಳಗೆ ಮುಗಿಸುತ್ತೇವೆ ಎಂದು, ಇವರು ಯಾವ ವರ್ಷದಲ್ಲಿ ಹೇಳುತ್ತಾರೋ ಅದೇ ವರ್ಷದೊಳಗೆ ಆ ಕೆಲಸವನ್ನು ಮುಗಿಸಬೇಕೆಂದು ಇವರಿಗೆ ಉದ್ದೇಶ ವಿಲ್ಲ. ಈ ಗ್ರಾಮಕ್ಕೆ ಕುಡಿಯುವ ನೀರಿನ ತೊಂದರೆ ಬಹಳ ಇರುವುದರಿಂದ ಟ್ರಾಕ್‌ನ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆ. ನನ್ನ ಕ್ಷೇತ್ರದಲ್ಲಿ ಸುಮಾರು ೯ ಲಕ್ಷ ರೂಪಾಯಿಗಳನ್ನು ಟ್ರಾಕ್‌ನಲ್ಲಿ ನೀರನ್ನು ಸರಬರಾಜು ಮಾಡುವ ಸಲುವಾಗಿ ಕೊಟ್ಟಿದ್ದೇವೆ. ಪಿ.ಹೆಚ್.ಇ.ನಲ್ಲಿ ಯಾವ ಕೆಲಸವೂ ಆಗುತ್ತಿಲ್ಲ. ಇದರ ಬಗ್ಗೆ ಹೆಚ್ಚಿನ ಗಮನ ಹರಿಸಿ ಈ ಗ್ರಾಮಕ್ಕೆ ಕುಡಿಯುವ ನೀರನ್ನೊದಗಿಸಲು ಈ ಕೆಲಸವನ್ನು ಆದಷ್ಟು ಬೇಗ ಮಾಡಿಸಿಕೊಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವಂತೆ ಆ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಿನ ವ್ಯವಸ್ಥೆಯ ಪ್ರಕಾರ ಈ ಕೆಲಸವನ್ನು ಅಲ್ಲಿಯ ಜಿಲ್ಲಾ ಪರಿಷತ್ತಿನವರೇ ಮಾಡಬೇಕಾಗುವುದು. ಇದನ್ನು ನಾವು ಡೈರೆಕ್ಟಾಗಿ ಮಾಡುವುದಕ್ಕೆ ಬರುವುದಿಲ್ಲ. ನಮಗೆ ಅಧಿಕಾರವಿಲ್ಲ. ಈ ಉದ್ದೇಶಕ್ಕಾಗಿ ಈ ವರ್ಷ ೨.೬೭ ಲಕ್ಷ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಆದಷ್ಟು ಬೇಕ ಈ ಕೆಲಸವನ್ನು ಮಾಡಿಸಿ ಕೊಡುವಂತೆ ಜಿಲ್ಲಾಪರಿಷತ್ತಿಗೆ ತಿಳಿಸುತ್ತೇವೆ.

ಸವದತ್ತಿ ಕೋಟೆಯನ್ನು ಉಳಿಸಿಕೊಳ್ಳುವುದು

೨೫೬೬. ಶ್ರೀ ಚಂದ್ರುಶೇಖರ್ ಎಂ. ಪಾಮನಿ (ಪರಸಗಡ) —ಮಾನ್ಯ ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸವದತ್ತಿ ಊರಿನಲ್ಲಿರುವ ಪುರಾತನದ ಹಾಗೂ ಪ್ರೇಕ್ಷಣೀಯ ಕೋಟೆಯು ಕೇಂದ್ರ ಸರ್ಕಾರದ ಉಸ್ತುವಾರಿಯಲ್ಲಿ ಬರುವುದೇ ಅಥವಾ ರಾಜ್ಯ ಸರ್ಕಾರದ ಉಸ್ತುವಾರಿ ವ್ಯಾಪ್ತಿಯಲ್ಲಿ ಬರುವುದೇ ?

ಆ) ಈ ಕೋಟೆಯು ಪೋಷಣೆ ಮತ್ತು ರಕ್ಷಣೆ ಇಲ್ಲದಿರುವುದರಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?